# ಅಧ್ಯಯನ – 1 Study I

# ನಿನ್ನ ರಾಜ್ಯವು ಬರಲಿ

## "THY KINGDOM COME"

**ದೇವರ ರಾಜ್ಯದ ಪ್ರಾಮುಖ್ಯತೆ, ಅದರಲ್ಲಿ ಆಸಕ್ತರಾಗಿರುವ ಮನುಷ್ಯರ ವರ್ಗವು, ಅದನ್ನು ವಿರೋಧಿಸುವವರ ವರ್ಗವು ಮತ್ತು ಯಾಕೆ ವಿರೋಧಿಸುತ್ತಾರೆ? ದೇವರ ರಾಜ್ಯದ ಸಾನಿಧ್ಯ, ಅದರ ಸ್ವರ್ಗೀಯ ವೈಭವ. ಅದರ ಪ್ರಸ್ತುತವಾದ ಸ್ಥಾಪನೆ.**

**ಭೂ**ಲೋಕದ ಇತಿಹಾಸದ ಅತ್ಯಂತ ಮಹತ್ವವಾದ ಘಟನೆಯೆಂದರೆ. ನಮ್ಮ ಕರ್ತನಾದ ಯೇಸುಕ್ರಿಸ್ತನು ಮತ್ತು ಸುವಾರ್ತಾ ಸಭೆಯ ಜಯಶಾಲಿಗಳಾದ ಆತನ ಆಯ್ದ ಜೊತೆಬಾಧ್ಯಸ್ಥರ ಕೈಗಳಿಂದ ಮಾನವರ ಮಧ್ಯದಲ್ಲಿ ದೇವರ ರಾಜ್ಯವನ್ನು ಸ್ಥಾಪಿಸುವುದು. ದೇವರ ವಾಕ್ಯದ ಅಧ್ಯಯನ ಬಗ್ಗೆ ಇರುವ ಹಿಂದಿನ ಸಂಪುಟಗಳಲ್ಲಿ ತೋರಿಸಿದಂತೆ ಈ ಮಹಾ ಘಟನೆಯು ದೇವರ ವಾಗ್ದಾನಗಳ ಬಗ್ಗೆ ಮತ್ತು ಅವುಗಳ ವಿಧಗಳ ಬಗ್ಗೆ ಸೂಚಿಸುವವುಗಳಾಗಿವೆ. ಇವುಗಳು ನಾವೀಗ ನೋಡುವಂತೆ ಸಮೀಪದಲ್ಲಿರುವುದು ಮಾತ್ರವಲ್ಲ, ಅವು ಉಚಿತವಾಗಿ ನಮ್ಮ ಮೇಲೆಯೇ ಅವೆ. ಈ ಸತ್ಯದ ಬಗ್ಗೆ ಎಚ್ಚತ್ತುಕೊಳ್ಳದೇ ಇರುವ ಯಾರೂ, ಯೋಗ್ಯವಾದ ರೀತಿಯಲ್ಲಿ ಅಥವಾ ಭಾಗಶಃವಾಗಿಯಾದರೂ ಅದನ್ನು ಗ್ರಹಿಸಲಾರರು. ಯಾರ ಹೃದಯವು ದೇವರ ಯುಗಗಳ ಯೋಜನೆಗಳ ಬಗ್ಗೆ ಪೂರ್ಣವಾದ ಸಹಾನುಭಾವ ವುಳ್ಳದ್ದಾಗಿದೆಯೋ, ಮತ್ತು ಯಾರು ಪಾಪ ಮತ್ತು ಯಾತನೆಗಳ ಹರಣ, ಮತ್ತು ಮರಣ ಸಂಕಟದಿಂದ ನರಳುವವರ ಉದ್ಧಾರದ ಬಗ್ಗೆ ಈ ರಾಜ್ಯದ ಮೂಲಕ ಪರಿಹಾರ ನೀಡುವ ದೇವರ ದಿವ್ಯ ಔಷಧಿಯನ್ನು ಕಾಣುತ್ತಾರೋ ಅಂಥವರು ಈ ಸಂಗತಿಯಲ್ಲಿ, ಕಾಲದಲ್ಲಿ ಮತ್ತು ಅದರ ಸ್ಥಾಪನೆಯ ರೀತಿಯಲ್ಲಿ ಮಗ್ನಗೊಳಿಸುವ ಆಸಕ್ತಿಯಿಂದ ಬಹುಶಃ ಹೆಚ್ಚಾಗಿ ಅನುಭವಿಸುತ್ತಾರೆ.

ನಮ್ಮ ಕರ್ತನು ತಾನೇ ನಮಗೆ ಕಲಿಸಿಕೊಟ್ಟ ಪ್ರಾರ್ಥನೆಯ "ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ" ಎಂಬುದರಲ್ಲಿ ಸೂಚಿತವಾಗಿರುವುದರ ನೆರವೇರಿಕೆಯನ್ನು ಯಾರು ನಿಸ್ಸಂದೇಹವಾಗಿ ನಂಬುತ್ತಾರೋ ಅಂಥವರು ಆ ರೀತಿ ಆತ್ಮದಲ್ಲಿಯೂ, ಸತ್ಯದಲ್ಲಿಯೂ ಹೃದಯ ಪೂರ್ವಕಾಗಿ ಪ್ರಾರ್ಥಿಸಿರುವುದಾದರೆ ಅವರ ಕೋರಿಕೆಯು ನೆರವೇರಿಕೆಯಲ್ಲಿ ಅತ್ಯಂತ ಚೈತನ್ಯಪೂರ್ಣ ಆಸಕ್ತಿಯನ್ನು ಅನುಭವಿಸಬೇಕು.

ಈ ಲೋಕವು ಸಹಾ, ಆ ರಾಜ್ಯದ ನಿಜವಾದ ಲಕ್ಷಣಗಳನ್ನು ಗ್ರಹಿಸಿಕೊಳ್ಳುವುದಾದರೆ ಅದನ್ನು ಒಮ್ಮೆಲೇ ಜಯಕಾರದೊಡನೆ ಸ್ವಾಗತಿಸುವರು ಎಂಬುದನ್ನು ನಾವು ನೋಡಬಹುದಾಗಿದೆ ಮತ್ತು ಕಡೆಗೆ ಅವರು ಅದನ್ನೇ ಮಾಡುವವರಾಗಿದ್ದಾರೆ. ಯಾಕೆಂದರೆ ಅದು ದೀರ್ಘಕಾಲದಿಂದ ಬಯಸಿದ ಆಶೀರ್ವಾದವಾಗಿ ಅದರೊಂದಿಗೆ ಸುವರ್ಣ ಸಹಸ್ರವಮಾನದ ಅಮೂಲ್ಯವಾದ ಭಾಗ್ಯಗಳನ್ನು ತರುವುದಾಗಿದೆ.

ಆದರೆ, ಒಂದು ಸಾಮಾನ್ಯ ವರ್ಗವು ಈ ನೀತಿವಂತಿಕೆಯ ನಿಯಮವನ್ನು ಬಹುಶಃ ವಿರೋಧಿಸ ಬಹುದಾಗಿದೆ. ಈ ವರ್ಗವು ಈ ಸುವರ್ಣ ನಿಯಮವನ್ನು ಪ್ರೀತಿಸದೇ ಇರುವವರನ್ನು, ಯಾರು ಇತರರನ್ನು ತಮ್ಮಂತೆಯೇ ಪ್ರೀತಿಸುವ ಬದಲಾಗಿ ಇತರರು ಜಜ್ಜಿಹೋಗುವುದನ್ನು, ತುಳಿತಕ್ಕೆ ಒಳಗಾಗುವುದನ್ನು, ಮತ್ತು ಅವರ ಉಚಿತವಾದ ಹಕ್ಕುಗಳನ್ನು, ಪ್ರತಿಫಲಗಳನ್ನು, ಬಹುಮಾನಗಳ, ಶ್ರಮದ ಫಲಗಳ ನಿರಾಕರಣೆ ಹೊಂದುವುದನ್ನು ನೋಡಲು ಅಪೇಕ್ಷಿಸುತ್ತಾರೋ ಅಂಥವರನ್ನು ತಾವು ದುಂದುವೆಚ್ಚದ ಮೋಜನ್ನು ಹೃದಯವು ಬಯಸುವುದಕ್ಕಿಂತಲೂ ಮತ್ತು ಕಾರಣವು ಕೇಳುವುದಕ್ಕಿಂತಲೂ ಹೆಚ್ಚಾಗಿ ಮನ ಬಂದಂತೆ ಅನುಭವಿಸಲೋಸುಗ ಆಲಂಗಿಸಿಕೊಳ್ಳುತ್ತಾರೆ. (ಯಾಕೋಬ 5: 1–9). ಇದು ಸಮಾಜದ ಪ್ರಸ್ತುತ ವ್ಯವಸ್ಥೆಯನ್ನು ಮರಣದ ಬಿಗಿಮುಷ್ಟಿಯೊಡನೆ ಹಿಡಿದಿದೆ ಮತ್ತು ಮೆಸ್ಸೀಯನ ವಾಗ್ದತ್ತ ರಾಜ್ಯವನ್ನು ತಮ್ಮ ಮನುಷ್ಯ ಸಹಜ ಪ್ರವೃತ್ತಿಯ ಮೂಲಕ ಭಯಪಡುತ್ತಿರುವಂತೆ ಕಾಣುತ್ತಾರೆ. ಇವರುಗಳು "ಆಸೆಯಂತೆ ಆಲೋಚನೆ" ಎಂದುಕೊಂಡು ರಾಜ್ಯವು ಎಂದಿಗೂ ಬರುವುದಿಲ್ಲ ಎಂದು ಅಪೇಕ್ಷಿಸುತ್ತಾನೆ. ದಾವೀದನು ಹೇಳುವಂತೆ "ಯಾರು ವಿಸ್ತಾರವಾದ ಭೂಸ್ಥಿತಿಗಳಿಗೆ ತಮ್ಮ ಹೆಸರನ್ನು ಕೊಟ್ಟಿದ್ದಾರೋ ಅಂಥವರಿಗೂ ಸಮಾಧಿಯೇ ಶಾಶ್ವತ ಮಂದಿರವು; ಅದೇ ಅವರ ನಿತ್ಯ ನಿವಾಸಸ್ಥಾನ .... ಮೂರ್ಖರಿಗೂ ಅವರ ಮಾತಿನಂತೆ ನಡೆಯುವವರಿಗೂ ಇದೇ ಗತಿ" (ಕೀರ್ತನೆ 49: 11,13).

ಈ ರಾಜ್ಯವನ್ನು ಕುರಿತ ತಲುಪುವ ಪ್ರವಾದಿಗಳ ಹೆಚ್ಚಾದ ಹೇಳಿಕೆಗಳಿಗೆ ಅಪನಂಬಿಕೆ ತೋರಿದ್ದಾರೆ ಅಥವಾ ನಿರ್ಲಕ್ಷಿಸಿದ್ದಾರೆ. ಯಾಕೆಂದರೆ ಇದು ಸದಾಕಾಲಕ್ಕೂ

ಅವರ ವಿಷಯ ವಸ್ತುವಾಗಿದೆ– "ಆ ಕಾಲದ ವಿಷಯವಾಗಿ ದೇವರು ಪೂರ್ವದಲ್ಲಿದ್ದ ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿದ್ದಾನೆ" (ಅ.ಕೃ. 3:21) ಅನೇಕರು ರಾಜ್ಯದ ಬರುವಿಕೆಗೆ ಭೀತರಾಗಿದ್ದಾರೆ ಮತ್ತು ಸಹಜ ಪ್ರವೃತ್ತಿಯಿಂದ ಸತ್ಯವನ್ನು ಅನುಭವಿಸುವಂತೆ ದೇವರು ತನ್ನ ರಾಜ್ಯವನ್ನು ಸ್ಥಾಪಿಸುವುದಾದರೆ ಅದು ನ್ಯಾಯದಲ್ಲಿ ಆಳುತ್ತದೆ; ನ್ಯಾಯವನ್ನು ತಕ್ಕುದಾಗಿ ಒದಗಿಸಿ, ಈ ಲೋಕದಲ್ಲಿ ಆಳ್ವಿಕೆ ಮಾಡುವ ಅನೇಕರು ತಮ್ಮ ಪ್ರಜೆಗಳೊಂದಿಗೆ ಸ್ಥಳಗಳನ್ನು ಬದಲಾಯಿಸುತ್ತಾರೆ ಅಥವಾ ಸೆರೆಮನೆಗೆ ಸೇರುತ್ತಾರೆ. ಅನೇಕ ದೊಡ್ಡ ವ್ಯಕ್ತಿಗಳು, ಶ್ರೀಮಂತರು, ಧನೋನ್ಮತ್ತರು ತಮ್ಮ ವೈಭವವನ್ನು, ಗೌರವವನ್ನು ಮತ್ತು ಅನ್ಯಾಯಾರ್ಜಿತವಾದ ಸಂಪತ್ತನ್ನು ಕಳಕೊಳ್ಳುವರು ಮತ್ತು ನಿಜವಾದ ಬೆಳಕಿನಲ್ಲಿ ತುಚ್ಛರಾಗಿ ಕಂಡುಬರುವರು. "ಮರೆಯಾಗಿರುವ ಯಾವುದೂ ವ್ಯಕ್ತವಾಗದೆ ಇರುವುದಿಲ್ಲ; ಹೊರಪಡದ ರಹಸ್ಯವೂ ಇಲ್ಲ" (ಮತ್ತಾಯ 10:26) ಎಂಬ ಸಾಕ್ಷ್ಯವನ್ನು ನಂಬದೇ ಹೋದರೂ, ಭಯಪಡುವವರಾಗಿದ್ದಾರೆ. ಲೂಕ 16: 1–9 ರಲ್ಲಿರುವ ಸಾಮ್ಯದಲ್ಲಿರುವ ಇಂತಹ ತುಚ್ಛರು – ಐಶ್ವರ್ಯ ಮತ್ತು ಅಧಿಕಾರದ ಅನ್ಯಾಯಗಾರರಾದ ಮನೆವಾರ್ತೆಯವರು ಅಂತಿಮ ಉಪಯೋಗಕ್ಕೆ ಸಾಮ್ಯದಲ್ಲಿ ತಿಳಿಸಿರುವಂತೆ ವಿವೇಕವನ್ನು ಮೆಚ್ಚಿಕೊಳ್ಳುವಂತಹ "ಬುದ್ಧಿವಂತರಲ್ಲ". ಅವರ ಹಿಂದೆ ವ್ಯಾಪಕ ವರ್ಗವಿದೆ, ಅವರಿಲ್ಲದೇ ಇವರು ಬಿದ್ದುಹೋಗುವರು. ಈ ದೊಡ್ಡವರ್ಗದವರು, ಬಹುಶಃ ಪ್ರಸ್ತುತದಲ್ಲಿ ಸಮಂಜಸವಾದುದಕ್ಕಿಂತಲೂ ಹೆಚ್ಚಾದ ಗೌರವದ, ಅಧಿಕಾರಸ್ಥಾನದ, ಸಂಪತ್ತು ಮತ್ತು ಅನುಕೂಲಗಳ ಪಾಲು ಹೊಂದಿಲ್ಲವಾದರೂ ಒಂದಾನೊಂದು ದಿನ ಸಾಮಾನ್ಯ ಜನಜಂಗಳಿಯ ಅಸೂಯೆ ಹುಟ್ಟಿಸುವ ಆಶ್ರಯದಾತರಾಗಿ ಸುಖಭೋಗದಲ್ಲಿ ಉರುಳಾಡುವ ತೆಳುವಾದ ನಿರೀಕ್ಷೆಯನ್ನು ಹೊಂದಿದ್ದಾರೆ. ತುಚ್ಛರಾದ ಇವರುಗಳು ಸ್ವಾರ್ಥವಾದ ಒಣಜಂಬದ ಗುಲಾಮರೂ, ಸ್ಥಿರವಿಲ್ಲದ ಅದೃಷ್ಟದ ಚಂಚಲರೂ ಆಗಿದ್ದಾರೆ. ಇವರುಗಳ ಬಗ್ಗೆ, ಸತ್ಯವೇನೆಂದರೆ, ಅಯ್ಯೋ! ಕೆಲವರು ಬಡವರ ಸ್ನೇಹಿತನಾದ ಕ್ರಿಸ್ತನ ಹೆಸರನ್ನು ಹೊಂದಿದ್ದು, ಅವರ ತುಟಿಗಳ ಮೂಲಕ ದೈನಂದಿನ ಆಹಾರವನ್ನು ಮಾತ್ರವೇ ಕೇಳಿಕೊಳ್ಳುತ್ತಿದ್ದರೂ ಮತ್ತು ಶಾಸ್ತ್ರೋಕ್ತವಾದ ಅಣಕದೊಡನೆ "ನಿನ್ನ ರಾಜ್ಯವು ಬರಲಿ" ಎಂದು ಬೇಡುತ್ತಿದ್ದರೂ, ಅದೇ ಸಮಯದಲ್ಲಿ ಅವರ ಜೊತೆಗಾರರ ಸಂಗಡ ಅವರ ಪ್ರತಿಯೊಂದು ನೋಟ, ನಡೆ ಮತ್ತು ವ್ಯವಹಾರಗಳಲ್ಲಿ ಅವರು ಪ್ರಸ್ತುತ ಅನ್ಯಾಯದ ಆಡಳಿತವನ್ನು ಎಷ್ಟರಮಟ್ಟಿಗೆ ಪ್ರೀತಿಸುತ್ತಾರೆಂದೂ, ಅನೀತಿವಂತಿಕೆಯಲ್ಲಿ ಎಷ್ಟರಮಟ್ಟಿಗೆ ಆನಂದಪಡುವರೆಂದೂ ತೋರಿಸುತ್ತಾರೆ. ಅವರು ಕ್ರಿಸ್ತನ ರಾಜ್ಯದ ಬರೋಣವನ್ನು ಸಂತೋಷದಿಂದ ಹೊಂದಿಕೊಳ್ಳುವುದಿಲ್ಲ.

ಆಶ್ಚರ್ಯವೆಂದರೆ ದೇವರ ಮಕ್ಕಳೆಂದು ಹೇಳಿಕೊಳ್ಳುವ ಅನೇಕರ ಮನೋವೃತ್ತಿಯೊಡನೆ ಗುರುತುಪಡಿಸುವ ಭಿನ್ನತೆಯಲ್ಲಿ – ಪದೇ ಪದೇ ಅಲ್ಲವಾದರೂ ನಾವು ಕೆಲವು ಸಮಾಜವಾದಿಗಳು ಮತ್ತಿತರರು ಕ್ರೈಸ್ತತ್ವವನ್ನು ಮತ್ತು ಅದರೊಂದಿಗೆ ಹೆಚ್ಚು ಅಡಿಗಡಿಗೆ ಸತ್ಯವೇದವನ್ನು, ಮತ್ತು ಪ್ರಕಟಗೊಂಡ ಧರ್ಮದಲ್ಲಿನ ಎಲ್ಲಾ ನಂಬಿಕೆಗಳನ್ನು ನಿರಾಕರಿಸಿದಾಗ್ಯೂ, ಅವರು ನೀತಿವಂತಿಕೆಯ ಕೆಲವು ಮೂಲಭೂತವಾದ ತತ್ವವಿಧಿಗಳನ್ನು ಗ್ರಹಿಸಿಕೊಳ್ಳುತ್ತಾರೆ, ಮಾನವರ ಸಾಮಾನ್ಯವಾದ ಭ್ರಾತೃತ್ವ ಮುಂತಾದವುಗಳನ್ನು ಮಾನ್ಯಮಾಡುತ್ತಾರೆ ಎಂಬುದನ್ನು ಅವರ ಕೆಲವೊಂದು ಬರಹಗಳು ಬಹು ಸುಂದರವಾಗಿ ತೋರಿಸುತ್ತವೆ. ಅವರು ಸಾಮಾಜಿಕ ಸಮಾನತೆಗಾಗಿ ನಿರೀಕ್ಷಿಸುವವರೂ, ಪ್ರಯಾಸಪಡುವವರೂ ಆಗಿರುವಂತೆ ತೋರಿಬರುತ್ತದೆ. ಜನರ ಮಧ್ಯದಲ್ಲಿ ಕ್ರಿಸ್ತನ ರಾಜ್ಯವನ್ನು ಸ್ಥಾಪಿಸುವುದರ ಫಲವಾಗಿ ಪರಿಶುದ್ಧ ಬರಹಗಳಲ್ಲಿ ಪದೇ ಪದೇ ಸಾಮಾನ್ಯವಾಗಿ ವಾಗ್ದಾನ ಮಾಡಲ್ಪಟ್ಟ ಅನುಕೂಲಕರ ಸ್ಥಿತಿಗಳು ಉಂಟಾಗಿ ದೇವರ ಚಿತ್ತವು ಭೂಲೋಕದಲ್ಲಿ ನೆರವೇರುತ್ತದೆ ಎಂದು ಎದುರು ನೋಡುತ್ತಾರೆ. ಆದಾಗ್ಯೂ, ಬಡ ಸಮಾಜವಾದಿಗಳಿಗೆ ಕೆಲವೊಮ್ಮೆ ಉದಾರವಾದ ವ್ಯವಹಾರಗಳ ಬಗ್ಗೆ ಮಾಡುವ ಅವರ ಸಮರ್ಥನೆಗಳು ಮತ್ತು ಸಮಾನತೆಗಳು ಹೆಚ್ಚಾಗಿ ಅವರ ಬಡತನದ ಪರಿಣಾಮವಾಗಿದೆ ಮತ್ತು ಸಾಮಾನ್ಯ ಅನುಕೂಲಗಳು ಮತ್ತು ಸವಲತ್ತುಗಳನ್ನು ಮೆಚ್ಚಿಕೊಳ್ಳದೇ ಇರುವದು ನೀತಿಯ ವೃದ್ಧಿಯಿಂದಲ್ಲ ಬಡತನ ದಿಂದಾಗಿದೆ; ಯಾಕೆಂದರೆ, ಅವರಲ್ಲಿ ಒಬ್ಬರು ಹೆಚ್ಚಾದ ಸಂಪತ್ತಿಗೆ ಬಾಧ್ಯಸ್ತರಾದರೆ ಅಥವಾ ಅದನ್ನು ಪಡಕೊಂಡರೆ, ಆತನು ನಿಜವಾಗಿಯೂ ತನ್ನ ಸಮಾಜವಾದದ ತತ್ವವಿಧಿಗಳನ್ನು ತೊರೆದುಬಿಡುವುದು ಬಹುತೇಕ ಖಚಿತವಾಗಿದೆ.

"ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಭೂಲೋಕದಲ್ಲಿಯೂ ನೆರವೇರಲಿ" ಎಂದು ಪ್ರಾರ್ಥಿಸುವ ಭಕ್ತರು ಜಾಗರೂಕತೆಯುಳ್ಳವರಾಗಿರಬೇಕು. ಇಲ್ಲವಾದಲ್ಲಿ, ಅವರ ಪ್ರಾರ್ಥನೆಯು ಕೇವಲ ತುಟಿ–

ಸೇವೆಯ ಅಣುಕು ಮಾತುಗಳಾಗುತ್ತವೆ. ಮತ್ತು ಅದನ್ನು ಅವರ ಹೃದಯ ಮತ್ತು ಜೀವನ ಒಪ್ಪಿಕೊಳ್ಳುವುದಿಲ್ಲ. "ನಿನ್ನ ಮಾತಿನ ಮೇಲೆಯೇ ನಿನಗೆ ತೀರ್ಪು ಮಾಡುತ್ತೇನೆ" (ಲೂಕ 19:22) ಎಂಬುದು ಅತ್ಯಂತ ಕಠಿಣವಾಗಿ ಶೋಧಿಸುವ ಮತ್ತು ಕಠೋರವಾದ ಖಂಡನೆಯನ್ನು ನ್ಯಾಯಾಧಿಪತಿಯು ಆತನ ಸೇವಕರೆಂದು ಹೇಳಿಕೊಳ್ಳುವವರು, ಆತನ ಪ್ರೀತಿಯ ನ್ಯಾಯುದ ರಾಜ್ಯಕ್ಕಾಗಿ ಹಂಬಲಿಸುವವರಿಗೆ ತಿಳಿಯಪಡಿಸುತ್ತಾರೆ. ಆ ರೀತಿಯಾಗಿ ಪ್ರಾರ್ಥಿಸುವವರು ಮತ್ತು ಬರಲಿರುವ ನೀತಿವಂತಿಕೆಯ ಆಳ್ವಿಕೆಯನ್ನು ನಂಬುವವರು ಅಂಥವರು ಈಗಲೂ ತಮ್ಮ ಕ್ರಿಯೆಗಳನ್ನು ಮತ್ತು ಮಾತುಗಳನ್ನು ದೈವನಿಯಮಕ್ಕನುಸಾರವಾಗಿ ಸಾಧ್ಯವಾದಷ್ಟು ಹೊಂದಾಣಿಕೆ ಮಾಡಿಕೊಳ್ಳಲಿ.

ಹಿಂದಿನ ಸಂಪುಟದ ಪಾಠಗಳ ಬಲವನ್ನು ಗ್ರಹಿಸಿಕೊಂಡವರು ದೇವರ ರಾಜ್ಯವು ಕೇವಲ ಬಾಹ್ಯವಾದುದಲ್ಲ, ದೃಶ್ಯವಾದುದೂ, ಭೂಲೋಕದ ವೈಭವವನ್ನು ಹೊಂದಿರುವುದೂ ಅಲ್ಲ, ಆದರೆ ದೇವರ ಶಕ್ತಿ ಮತ್ತು ವೈಭವವನ್ನು ಹೊಂದಿರುವುದು ಎಂಬುದನ್ನು ಕಂಡುಕೊಳ್ಳುತ್ತಾರೆ. ಈ ಲೋಕದ ರಾಜ್ಯದ ಅಧಿಕಾರದ ಗುತ್ತಿಗೆ ಇನ್ನೂ ಮುಗಿಯದ ಕಾರಣ ಈ ಲೋಕದ ರಾಜ್ಯವನ್ನು ಸೋಲಿಸಿ ಅಧಿಕಾರ ಚ್ಯುತಿಗೊಳಿಸದಿದ್ದರೂ, ಈಗಾಗಲೇ ದೇವರ ರಾಜ್ಯದ ಕಾರ್ಯನಿರ್ವಾಹಕ ಮಂಡಲಿಯ ಅಧಿಕಾರವ್ಯಾಪ್ತಿಗೆ ಬಂದಿದೆ. ಹೀಗಾಗಿ ಅದರ ಸ್ಥಾಪನೆಯು ಪ್ರಗತಿಪಥದಲ್ಲಿದೆ, ಆದಾಗ್ಯೂ ಕಾಲದ ಸಂಕೇತಗಳು, ಮಾತ್ರವಲ್ಲದೆ ಹಿಂದಿನ ಸಂಪುಟದಲ್ಲಿ ಪರಿಗಣಿಸಿದ ಪ್ರವಾದನೆಗಳು ಮತ್ತು ಈ ಸಂಪುಟದಲ್ಲಿ ಪರೀಕ್ಷಿಸಿದ ಬೇರೆ ಕೆಲವು ಸೂಚಿಸುವಂತೆ ಅದು ಇನ್ನೂ ಭೂಲೋಕದ ರಾಜ್ಯದ ಮೇಲೆ ಸಂಪೂರ್ಣ ನಿಯಂತ್ರಣ ಪಡೆದಿಲ್ಲ.

ಮುಂದಿನ ಅಧ್ಯಾಯಗಳು ಹೆಸರಿಗೆ ಮಾತ್ರದ ಸಭೆಗಳು ಮತ್ತು ಲೋಕದ ರಾಜ್ಯಕ್ಕಾಗಿ ಮಾಡಿಕೊಳ್ಳುವ ಸಿದ್ಧತೆಗಳ ವಿವಿಧ ಹಂತಗಳ ಬಗ್ಗೆ ಇರುವ ಪ್ರವಾದನೆಗಳನ್ನು ಪ್ರಸ್ತುತಿಪಡಿಸುತ್ತವೆ. ಮಾತ್ರವಲ್ಲದೆ, ಅದರ ಸ್ಥಾಪನೆಯ ಕಾಲದಲ್ಲಿ ಜರುಗುತ್ತವೆಂದು ಮುಂತಿಳಿಸಿರುವ ಕೆಲವು ಅತ್ಯಂತ ಮಹತ್ವವುಳ್ಳ ಬದಲಾವಣೆಗಳ ಬಗ್ಗೆ ನಮ್ಮ ಗಮನವನ್ನು ಸೆಳೆಯುತ್ತವೆ. – ಇದಕ್ಕಿಂತ ಮೇಲಾಗಿ ಈ ರಾಜ್ಯದಲ್ಲಿ ಜೊತೆ–ಭಾದ್ಯಸ್ಥಿಕೆಗಾಗಿ ಹಂಬಲಿಸುತ್ತಿರುವ ಜೀವಂತ ಸಂತರುಗಳಿಗೆ – ತಮ್ಮ ಒಡೆಯುನೂ, ಮುಖ್ಯಕೊಯ್ಲುಗಾರನೂ ಮತ್ತು ಅರಸನೂ ಆದವನ ಸಹಕಾರದಲ್ಲಿ ಈ ನಡೆಯುತ್ತಿರುವ ಹಾಗೂ ಪ್ರಗತಿಯಲ್ಲಿರುವ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಬಯಸುವುದಕ್ಕಿಂತ ಹೆಚ್ಚು ಆಳವಾದ ಮತ್ತು ಹೆಚ್ಚು ಆಸಕ್ತದಾಯಕವಾದುದೇನೂ ಇಲ್ಲ.

* * * * * * *